**ದಿನಾಂಕಃ13.10.2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಆರ್.ವಿ.ಕೆ., ವಕೀಲರಿಂದಃ-**

ಪ್ರತಿವಾದಿಯರ ವಿರುದ್ದ ತಾವು ಏನು ಬೇಡಿ ದಾವೆ ಮಾಡಿರುತ್ತೀರಿ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಾವಾ ಆಸ್ತಿಗಳು ಮೂಲತಃ ಯಾರಿಗೆ ಸೇರಿದಂತಹ ಆಸ್ತಿಗಳು ಎಂದರೆ ಸಾಕ್ಷಿ, ನನ್ನ ಮಾವ ಹೊಂಬಾಳಯ್ಯನಿಗೆ ಸೇರಿದ ಆಸ್ತಿಗಳು ಎಂದು ನುಡಿಯುತ್ತಾರೆ. ಹೊಂಬಾಳಯ್ಯರವರ ಹೆಂಡತಿಯ ಹೆಸರೇನು ಎಂದರೆ ಸಾಕ್ಷಿ, ಸಣ್ಣಮಾರಮ್ಮ ಎನ್ನುತ್ತಾರೆ. ಸಣ್ಣಮಾರಮ್ಮ ಮತ್ತು ಹೊಂಬಾಳಯ್ಯನವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ 4 ಜನ ಎನ್ನುತ್ತಾರೆ. ನನ್ನ ಒಬ್ಬ ಮೈದುನ ರಾಜು, ನನ್ನ ನಾದಿನಿ ಶಾಂತ ಅವರು ಬದುಕಿದ್ದಾರೆ. ನನ್ನ ಗಂಡ ಮತ್ತು ಇನ್ನೊಬ್ಬ ಮೈದುನ ಮರಿಯಪ್ಪ ಇವರುಗಳು ತೀರಿಕೊಂಡಿರುತ್ತಾರೆ. ತೀರಿಕೊಂಡ ನಿಮ್ಮ ಮೈದುನನ ಹೆಂಡತಿ ಮಕ್ಕಳನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಮ್ಮ ಮಾವ ಹೊಂಬಾಳಯ್ಯ ಯಾವಾಗ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ನಾನು ಮದುವೆ ಆಗಿ ಬರುವ 7-8 ವರ್ಷ ಮೊದಲೇ ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ನನ್ನ ಅತ್ತೆ ಸಣ್ಣಮಾರಮ್ಮ ನಾನು ಮದುವೆ ಆಗಿ ಬಂದ 5-6 ವರ್ಷಗಳ ನಂತರ ಮರಣ ಹೊಂದಿರುತ್ತಾರೆ. ನನ್ನ ಅತ್ತೆ ಸಣ್ಣಮಾರಮ್ಮ ಬದುಕಿದ್ದಾಗಲೇ ದಾವೆ ಆಸ್ತಿಗಳನ್ನು ಬಾಯಿ ಮಾತಿನಲ್ಲಿ ಭಾಗ ಮಾಡಿದ್ದರು, ಇವರಿವರು ಇಂತಿಂತಹ ಜಾಗವನ್ನು ವ್ಯವಸಾಯ ಮಾಡಿಕೊಳ್ಳಿ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ದಾವಾ ಐಟಂ ನಂಬರ್.3, ಸರ್ವೆ ನಂಬರ್.238ರಲ್ಲಿ 1 ಎಕರೆ ಜಮೀನನ್ನು ಕಾಡಯ್ಯರವರಿಗೆ ಬಿಟ್ಟು ಇನ್ನುಳಿಕೆ ಜಮೀನನ್ನು ನನಗೆ ಮತ್ತು ಜಯಲಕ್ಷ್ಮಮ್ಮರವರಿಗೆ ವ್ಯವಸಾಯ ಮಾಡಲು ಬಿಟ್ಟುಕೊಟ್ಟಿದ್ದರು ಎಂದರೆ ಸರಿ. ದಾವಾ ಐಟಂ ನಂಬರ್.4ರ ಸ್ವತ್ತಿನಲ್ಲಿ ಜಯಲಕ್ಷ್ಮಮ್ಮ ಮತ್ತು 1ನೇ ಪ್ರತಿವಾದಿ ರಾಜು ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿ, ರಾಜು ಮಾತ್ರ ಸ್ವಾಧೀನ ಇದ್ದಾರೆ ಎನ್ನುತ್ತಾರೆ. ಬಾಯಿ ಮಾತಿನಲ್ಲಿ ನಮಗೆ ಬಿಟ್ಟಿದ್ದ ದಾವಾ

ಆಸ್ತಿಗಳನ್ನು 1ನೇ ಪ್ರತಿವಾದಿಯು ವ್ಯವಸಾಯ ಮಾಡಿ ನನಗೆ 1 ಕ್ವಿಂಟಾಲ್ ರಾಗಿ ಮತ್ತು ಜಯಲಕ್ಷ್ಮಮ್ಮನಿಗೆ 2 ಕ್ವಿಂಟಾಲ್ ರಾಗಿ ಕೊಡುತ್ತಿದ್ದರು ಎಂದರೆ ಸರಿಯಲ್ಲ. ವ್ಯವಸಾಯದಿಂದ ಬಂದಂತಹ ಉತ್ಪನ್ನದ ಅರ್ಧ ಭಾಗವನ್ನು ನಾನು ಮತ್ತು ಜಯಲಕ್ಷ್ಮಮ್ಮ ಪಡೆಯುತ್ತಿದ್ದೆವು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್.2 ಸರ್ವೆ ನಂಬರ್.144ರ ಜಮೀನು ನನ್ನ ಅತ್ತೆ ಸಣ್ಣಮಾರಮ್ಮರವರಿಗೆ ಸರ್ಕಾರದಿಂದ ಮಂಜೂರಾದಂತಹ ಆಸ್ತಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಐಟಂ ನಂಬರ್.2ರ ಸ್ವತ್ತನ್ನು ನನ್ನ ಅತ್ತೆ ಸಣ್ಣಮಾರಮ್ಮ 1ನೇ ಪ್ರತಿವಾದಿಯ ಹೆಂಡತಿ ಲಕ್ಷ್ಮಿರವರಿಗೆ ಮರಣ ಶಾಸನ ಬರೆದು ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಹೆಂಡತಿ ಲಕ್ಷ್ಮಿ ಸದರಿ ಮರಣ ಶಾಸನ ಪತ್ರದ ಮೇಲೆ ನಮ್ಮ ವಿರುದ್ದ ಹಕ್ಕು ಘೋಷಣೆ ದಾವೆ ಮಾಡಿದ್ದಾರೆ ಎಂದರೆ ಸರಿ. ನನ್ನ ಅತ್ತೆ ಬಾಯಿ ಮಾತಿನಲ್ಲಿ ಮಾಡಿಕೊಟ್ಟ ಭಾಗದಂತೆ ಪ್ರತ್ಯೇಕ ಸ್ವಾಧೀನವಿದ್ದೇವೆ ಎಂದರೆ ಸಾಕ್ಷಿ ಈ ವರ್ಷದಿಂದ ಇದ್ದೇವೆ ಎನ್ನುತ್ತಾರೆ. ದಾವಾ ಐಟಂ ನಂಬರ್.1ರ ಸ್ವತ್ತು ಸರ್ವೆ ನಂಬರ್.99ರಲ್ಲಿ 1 ಎಕರೆ 29ವರೆ ಗುಂಟೆ ಜಮೀನನ್ನು 1ನೇ ಪ್ರತಿವಾದಿಗೆ ನನ್ನ ಅತ್ತೆ ಸಣ್ಣಮಾರಮ್ಮ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೊಂಗನೂರು ಗ್ರಾಮದಲ್ಲಿ ವಾಸವಿದ್ದೇನೆ ಎಂದರೆ ಸಾಕ್ಷಿ, ಎ.ವಿ. ಹಳ್ಳಿಯಲ್ಲಿ ವಾಸವಿದ್ದೇನೆ ಎನ್ನುತ್ತಾರೆ. ನಮ್ಮ ಭಾಗಕ್ಕೆ ಬಾಯಿ ಮಾತಿನಲ್ಲಿ ಬಂದಂತಹ ಭಾಗ ಸ್ವಾಧೀನದಲ್ಲಿ ಇದ್ದರೂ ದಾವಾ ಆಸ್ತಿಗಳಲ್ಲಿ ಭಾಗ ಬರಬೇಕು ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**
(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ.